ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 11-03-2024 ರಂದು ಬೊಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀಮತಿ ಪಿ ಕೆ ಟಿ ನ್ಯಾಯವಾದಿರವರಿಂದಃ

ವಾದ ಪತ್ರದ ಪ್ಯಾರಾ ನಂ. 5 ರಲ್ಲಿ ತಿಳಿಸಿದಂತೆ ನಿನ್ನ ಯೊಗ್ಯತೆ ನೀನು ತೋರಿದ್ದಿಯಾ? ಈ ಸಂದೇಶವು ಪ್ರತಿವಾದಿಯ ಮೊಬೈಲ್ ನಿಂದ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಪ್ರತಿವಾದಿಯ ಮೊಬೈಲ್ ನಿಂದಲೇ ಬಂದಿರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಒಂದು ಮಹಿಳಾ ನ್ಯಾಯಾವಾದಿಯು ರೂ.400/-ಗಳನ್ನು ತಿಂದಿದ್ದಿರಾ ಎಂದು ಕಳುಹಿಸಿದ ಸಂದೇಶದಲ್ಲಿ ರೇಣುಕಾ ಭಾರದ್ವಾಜ್ ಎಂದು ನಿಮ್ಮ ಹೆಸರು ಎಲ್ಲಿಯೂ ಇರುವುದಿಲ್ಲ ಎಂದರೆ ಸರಿ. ಆದರೆ ನಾನು ಆ ಸಮಯದಲ್ಲಿ ಎಕೈಕ ಮಹಿಳಾ ಪ್ರತಿನಿಧಿ ಇದ್ದು, ಆ ಸಂದೇಶ ನನ್ನನ್ನೆ ಉದ್ದೇಶಿಸಿಇದ್ದು, ನನಗೆ ಅನ್ವಯಿಸುತ್ತದೆ ಎಂದು ಸಾಕ್ಷಿ ಉತ್ತರಿಸುತ್ತಾರೆ. ವಾದಿಯಾದ ನನ್ನನ್ನು ನೀವು ಸದರಿ ಗ್ರೂಪ್ ನಿಂದ ಕಿತ್ತು ಹಾಕಿದ ನಂತರ ನಾನು ಯಾವುದೇ ಸಂದೇಶ ಕಳುಹಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದೆ ಅಂತಹ ಸಂದೇಶ ಕಳುಹಿಸಬಾರದು ಮತ್ತು ವಿಷಯ ದೊಡ್ಡದು ಆಗಬಾರದು ಎಂದು ನಾನು ನಿಮ್ಮನ್ನು ಗ್ರೂಪ್ ನಿಂದ ಕಿತ್ತು ಹಾಕಿರುತ್ತೇನೆ ಎಂದು ಸಾಕ್ಷಿಯು ಸಾಕ್ಷ್ಯ ನುಡಿಯುತ್ತಾರೆ. ನನ್ನ ವಾದ ಪತ್ರದ ಪ್ಯಾರಾ ನಂ. 5 ರಲ್ಲಿ ತಿಳಿಸಿದಂತೆ ನಿನ್ನ ಯೊಗ್ಯತೆ ನೀನು ತೋರಿದ್ದಿಯಾ? ಈ ಸಂದೇಶವು ತಿಳಿಸಿದಂತೆ ಮೊಬೈಲ್ ನಂಬರ್ 9449453265 ರಿಂದ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಸದರಿ ಸಂದೇಶವು ಮೊಬೈಲ್ ಸಂಖ್ಯೆ 8073528289 ಈ ನಂಬರನಿಂದ ನನ್ನ ನಂಬರಗೆ ಬಂದಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಹಾಜರುಪಡಿಸಿದ ಸಿಡಿಯಲ್ಲಿ ನೋಡಿದರೆ ಸದರಿ ಸಂದೇಶವನ್ನು ನಾನೇ ಸ್ವತಃ ನನ್ನ ಮೊಬೈಲ್ ನಂಬರನಿಂದ ಕಾರವಾರ ಲೇಡಿ ಅಡ್ವಕೇಟ್ಸ್ ಗ್ರೂಪ್ ಗೆ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಸದರಿ ಸಂದೇಶವು ನನಗೆ ಮೊಬೈಲ್ ಸಂಖ್ಯೆ 8073528289 ಈ ನಂಬರನಿಂದ ನನ್ನ ನಂಬರ ಆದ 8273284070 ಗೆ ಬಂದಿರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಈ ದಾವೆಯನ್ನು ನಾನು ದುಡ್ಡು ಮಾಡುವ ಉದ್ದೇಶದಿಂದ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ನನಗೆ ಅವಮಾನ ಹಾಗೂ ಮಾನಸಿಕ ನೋವು ಆಗಿದ್ದುದರಿಂದ ಮತ್ತು ನನ್ನ ವೃತ್ತಿಗೆ ಹಾನಿಯಾಗಿದ್ದುರಿಂದ ಈ ದಾವೆಯನ್ನು ನಾನು ಹಾಕಿರುತ್ತೇನೆ.

ನನ್ನ ಗಂಡ ನನ್ನ ವಿರುದ್ಧ ಮಹಾರಾಷ್ಟ್ರದ ಪನ್ವೆಲ್ ನ್ಯಾಯಾಲಯದಲ್ಲಿ ನನ್ನ ವಿರುದ್ಧ ಮಾನ ಹಾನಿ ಪ್ರಕರಣ ದಾಖಲಿಸಿದ್ದು ಇರುತ್ತದೆ ಎಂದರೆ ಸರಿಯಲ್ಲ. ಅದನ್ನು ಹೊರತುಪಡಿಸಿ ನನ್ನ



ವಿರುದ್ಧ ಮಹಾರಾಷ್ಟ್ರದ ಪನ್ವೆಲ್ ನ್ಯಾಯಾಲಯದಲ್ಲಿ ಎನ್ ಸಿ ಪ್ರಕರಣಗಳು ನಡೆಯುತ್ತಿರುತ್ತವೆ ಎಂದರೆ ಸರಿಯಲ್ಲ. ಅಲ್ಲದೇ ಮಹಾರಾಷ್ಟ್ರದ ಮುಂಬೈ ನ್ಯಾಯಾಲಯದಲ್ಲಿ ಕಕ್ಷಿಗಾರರ ವಿರುದ್ಧ ಆಕೆಗೆ ಬಂದ ಪರಿಹಾರ ಮೊತ್ತದಲ್ಲಿ ರೂ.45,000/-ಫೀಸ್ ಕೊಡಬೇಕು ಎಂದು ನಾನು ದಾವೆ ಹಾಕಿರುತ್ತೆನೆ ಎಂದರೆ

ಸರಿಯಲ್ಲ. ನನ್ನ ಮೂಲ ಉದ್ದೇಶ ದುಡ್ಡು ಮಾಡುವುದು ಇರುತ್ತದೆ ಆ ಕಾರಣದಿಂದ ನಾನು ಪ್ರತಿವಾದಿಯಿಂದ ದುಡ್ಡನ್ನು ಲಪಟಾಯಿಸಬೇಕು ಎಂಬ ಉದ್ದೇಶದಿಂದ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ .**

**ಸಿವಿಲ್ ನ್ಯಾಯಾಧೀಶರು ಕಾರವಾರ**